# ಸಾಧನೆಯ ಹಾದಿಯಲ್ಲಿ...

## ಅರಿವಿನ ಪಥ

### 'ಆತ್ಮೇತ್ಯೇವ ಉಪಾಸೀತ'

**ಭೌ**ತಿಕದೃಷ್ಟಿಯನ್ನು ಮೀರಿ ಹೋಗುವುದು, ಅತೀಂದ್ರಿಯತೆಯನ್ನು ಪರಿಭಾವಿಸಲು ಪ್ರಯತ್ನಿಸುವುದು – ಇದೇ ಆಧ್ಯಾತ್ಮಿಕ ಸಾಧನೆಯ ಸಾರಸರ್ವಸ್ವವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಬೃಹದಾರಣ್ಯಕ ಉಪನಿಷತ್ತು ನಮ್ಮನ್ನು ಅತ್ಯದ್ಭುತವಾದ ಬೌದ್ಧಿಕ ಅನ್ವೇಷಣೆಯಲ್ಲಿ ತೊಡಗಿಸುತ್ತದೆ. ನಾವು ಯಾವುದನ್ನು ಸಾಧನೆಯಲ್ಲಿ ಗುರಿಯಾಗಿ ಇಟ್ಟುಕೊಳ್ಳಬೇಕು ಎಂಬುದನ್ನು ಈ ಉಪನಿಷತ್ತು ನಮಗೆ ತರ್ಕಬದ್ಧವಾಗಿ ಹೇಳಿಕೊಡುತ್ತದೆ. ಅದನ್ನು ತಿಳಿದುಕೊಳ್ಳಲು ನಾವು ಅದರ ಒಂದು ಮುಖ್ಯವಾದ ಮಂತ್ರವನ್ನು (೧:೪.೭) ಅಧ್ಯಯನ ಮಾಡಬೇಕು.

ಅದರ ಸಂಕ್ಷಿಪ್ತ ವಿವರಣೆ ಹೀಗಿದೆ: ಮೊದಲು ಈ ಜಗತ್ತು ಅವ್ಯಕ್ತವಾಗಿತ್ತು. ಈ ಅವ್ಯಕ್ತವಾದ ಜಗತ್ತು ಅನಂತರ ನಾಮರೂಪಗಳನ್ನು ಪಡೆದುಕೊಂಡು ವ್ಯಕ್ತವಾಯಿತು. ಈಗಲೂ ಕೂಡ ಅದು ನಾಮರೂಪಗಳಿಂದಲೇ ಕೂಡಿದೆ. ಕ್ಷೌರಿಕನ ಕತ್ತಿಯು ಅದರ ಕೋಶದ ಉದ್ದಕ್ಕೂ ಹೇಗೆ ಇಡಲ್ಪಡುತ್ತದೆಯೋ, ಅಗ್ನಿಯು ತನ್ನ ಮೂಲವಾದ ಸೌದೆಯಲ್ಲಿ ಹೇಗೆ ಇರುತ್ತದೆಯೋ, ಹಾಗೆ ಆತ್ಮನೂ ಕೂಡ ನಮ್ಮ ಉಗುರಿನ ತುದಿಯವರೆಗೂ ಎಲ್ಲ ಕಡೆ ವ್ಯಾಪಿಸಿದ್ದಾನೆ. ಅವನು ಪ್ರಾಣಕ್ರಿಯೆಯಲ್ಲಿ ತೊಡಗಿರುವಾಗ ಅವನನ್ನು ಪ್ರಾಣನೆಂದು ಕರೆಯುತ್ತೇವೆ. ಮಾತನಾಡುವಾಗ ಮಾತೆಂದೂ, ನೋಡುವಾಗ ಕಣ್ಣೆಂದೂ, ಕೇಳುವಾಗ ಶ್ರೋತ್ರವೆಂದೂ, ಮನನ ಮಾಡುವಾಗ ಮನಸ್ಸೆಂದೂ ಈ ಆತ್ಮನೇ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಾನೆ. ಆದರೆ ಇವು ಯಾವುದೂ ಅವನ ನೈಜಸ್ಥಿತಿಯನ್ನು ಸೂಚಿಸುವುದಿಲ್ಲ. ಈ ಎಲ್ಲ ಹೆಸರುಗಳು ಅವನು ಭಾಗಿಯಾಗುವ ಬೇರೆ ಬೇರೆ ಕಾರ್ಯಗಳ ಮೂಲಕ ಉಂಟಾದ ಹೆಸರುಗಳು, ಅಷ್ಟೆ. ಯಾರು ಆತ್ಮನನ್ನು ಪ್ರಾಣ, ಶ್ರೋತ್ರ ಮುಂತಾದ ಹೆಸರುಗಳಿಂದ ಉಪಾಸಿಸುತ್ತಾನೋ ಅವನು ಆತ್ಮದ ಕುರಿತಂತೆ ನಿಜವಾದ ಅರಿವನ್ನು ಹೊಂದಿಲ್ಲ. ಪ್ರಾಣ ಮುಂತಾದ ಕಾರ್ಯಗಳು ಆತ್ಮನ ಅಪೂರ್ಣ ರೂಪಗಳು. ಆತ್ಮೇತ್ಯೇವ ಉಪಾಸೀತ– **ಅವನನ್ನು ಆತ್ಮವೆಂದೇ ಉಪಾಸಿಸಬೇಕು**. ಅಂದರೆ, ಪ್ರಾಣ ಮುಂತಾದ ಪರಿಕಲ್ಪನೆಗಳನ್ನು ತ್ಯಜಿಸಬೇಕು. ಏಕೆಂದರೆ ಆತ್ಮ ಎಂಬ ಭಾವನೆಯಲ್ಲಿಯೇ ಪ್ರಾಣ ಮುಂತಾದುವೆಲ್ಲವೂ ಒಂದಾಗಿಬಿಡುವುವು. ಪ್ರಾಣ, ಮನಸ್ಸು ಮೊದಲಾದ ಸಮುದಾಯಗಳಲ್ಲಿ ನಾವು ಅರಸಬೇಕಾಗಿರುವುದು ಪರಿಶುದ್ಧ ಆತ್ಮವನ್ನು ಮಾತ್ರ.

ವೈಚಾರಿಕ ಮಾರ್ಗವನ್ನು ಹೇಗೆ ಕೈಗೊಳ್ಳಬೇಕು ಎಂಬುದರ ಸ್ಪಷ್ಟ ನಿರ್ದೇಶನ ಇಲ್ಲಿದೆ. ನಮ್ಮ ಚಿಂತನೆಯ ಹಾದಿಯಲ್ಲಿ ನಾವು ತಿಳಿದುಕೊಳ್ಳಬೇಕಾಗಿರುವುದು ಜಗತ್ತಿನಲ್ಲಿ ಕಾಣಬರುವ ವಿವಿಧ ಕಾರ್ಯರೂಪಗಳನ್ನಲ್ಲ. ಇಂದು ಅದನ್ನೇ ಭೌತಿಕ ವಿಜ್ಞಾನ ಮಾಡುತ್ತಿರುವುದು. ಈ ಬಗೆಯ ಮಾರ್ಗದಲ್ಲಿ ಸತ್ಯವು ಪರಿಪೂರ್ಣರೂಪದಲ್ಲಿ ನಮಗೆ ದೊರೆಯುವುದಿಲ್ಲ ಎಂದು ಉಪನಿಷತ್ತು ಇಲ್ಲಿ ಘಂಟಾಘೋಷವಾಗಿ ಸಾರುತ್ತದೆ. ಆಧ್ಯಾತ್ಮಿಕ ಸಾಧನೆಯಲ್ಲಿ ನಾವು ಅರಸಬೇಕಾದುದು ಏನನ್ನು? ಪರಿಪೂರ್ಣ ಸತ್ಯವನ್ನು. ಆ ಪರಿಪೂರ್ಣತೆಯು ಇರುವುದು ವಿಶ್ವೈಕತತ್ತ್ವವಾದ ಆತ್ಮವೆಂಬ ಭಾವನೆಯಲ್ಲಿ ಮಾತ್ರ. ಹೀಗಾಗಿ ಅದನ್ನು ಮಾತ್ರವೇ ಉಪಾಸಿಸಬೇಕು ಅಂದರೆ ಧ್ಯಾನಿಸಬೇಕು. ಇದೇ ಉಪನಿಷತ್ತಿನ ಆಶಯ.

> **ಯಾಜ್ಞವಲ್ಕ್ಯನೆಂಬ ಹೆಸರು ಒಬ್ಬ ನೈಜ ವ್ಯಕ್ತಿಯನ್ನು ಪ್ರತಿನಿಧಿಸುವುದಾದರೆ, ಆ ಹೆಸರಿನ ಕೆಳಗೆ ಹಲವು ವಿಭಿನ್ನ ಚಿಂತನೆಗಳು ಮತ್ತು ತರ್ಕಗಳು ಸೇರಿಕೊಂಡಿರುವುದಷ್ಟೇ ಆಗಿಲ್ಲದಿದ್ದರೆ, ಅವನು ಎಲ್ಲಾ ಕಾಲಕ್ಕೂ, ಜಗತ್ತಿನ ಅತ್ಯಂತ ಶ್ರೇಷ್ಠ ತತ್ತ್ವಶಾಸ್ತ್ರಜ್ಞರ ಪಂಕ್ತಿಯಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಳ್ಳುತ್ತಾನೆ.**
>
> *– ಎ.ಎಸ್. ಗೆಡೆನ್*

ಅದಲ್ಲದೆ ಆತ್ಮದ ಉಪಾಸನೆಗೆ ಇನ್ನೊಂದು ಕಾರಣವನ್ನು ಕೂಡ ಉಪನಿಷತ್ತು ಕೊಡುವುದು. ಅದೆಂದರೆ, ಆತ್ಮವು ಹೊರಗಿನದೇನೂ ಅಲ್ಲ. ಅದು ನಮ್ಮ ಮಕ್ಕಳಿಗಿಂತಲೂ, ಸಂಪತ್ತಿಗಿಂತಲೂ ಹೆಚ್ಚು ಪ್ರಿಯವಾಗಿದೆ. ಏಕೆಂದರೆ ನಾವು ನಿಜವಾಗಿ ಆತ್ಮವಲ್ಲದೆ ಬೇರಲ್ಲ. ನಾವು ನಮ್ಮನ್ನು ಇವೆಲ್ಲಕ್ಕಿಂತ ಅಧಿಕವಾಗಿ ಪ್ರೀತಿಸುತ್ತೇವೆ, ಅಲ್ಲವೇ? ಇನ್ನೊಂದು ಸ್ವಾರಸ್ಯವೆಂದರೆ, ಆತ್ಮವು ನಮ್ಮ ಪಾಲಿಗೆ ಯಾವತ್ತೂ ಸಾಯುವುದಿಲ್ಲ. ನಮಗೆ ಪ್ರಿಯವಾದ ಇತರ ವಸ್ತುಗಳು ನಾಶವಾಗಬಹುದು. ಆದರೆ, ನಮಗೆ ಅತ್ಯಂತ ಪ್ರಿಯನಾದ 'ನಾನು' ಎನ್ನುವುದು ನಮ್ಮ ಪಾಲಿಗೆ ಎಂದಿಗೂ ಇಲ್ಲವಾಗುವುದು ಸಾಧ್ಯವೇ ಇಲ್ಲ.

ಇದಲ್ಲದೆ, ಉಪನಿಷತ್ತು ಹೇಳುವಂತೆ, ಯಾವುದು ಬ್ರಹ್ಮವೋ ಅದೇ ಆತ್ಮ. ಬ್ರಹ್ಮವೆಂದರೆ ಎಲ್ಲೆಲ್ಲೂ ಇರುವ ತತ್ತ್ವ. ಉಪನಿಷತ್ತು ಹೇಳುತ್ತದೆ: ಮೊದಲು ಬ್ರಹ್ಮ ಮಾತ್ರವೇ ಇತ್ತು. ಅದಕ್ಕೆ "ನಾನು ಬ್ರಹ್ಮ" ಎಂಬ ಅರಿವು ಬಂದಿದ್ದರಿಂದಲೇ ಅದು ಎಲ್ಲವೂ ಆಗಿ

ಪರಿಣಮಿಸಿತು. 'ನಾನು ಬ್ರಹ್ಮನಾಗಿದ್ದೇನೆ' ಎಂದು ಇದೇ ರೀತಿ ಯಾರು ತಿಳಿದುಕೊಳ್ಳುವರೋ, ಅವರೇ ಇದೆಲ್ಲವೂ ಆಗುತ್ತಾರೆ ಅಂದರೆ ಸರ್ವವ್ಯಾಪಿತ್ವಭಾವವನ್ನು ಹೊಂದುತ್ತಾರೆ.

ಬಹಳ ಅರ್ಥಗರ್ಭಿತವಾದ ಪರಿಭಾಷೆಯಲ್ಲಿ ಆಧ್ಯಾತ್ಮಿಕ ಸಾಧನೆಯ ನಿಗೂಢತೆಯನ್ನು ಬೃಹದಾರಣ್ಯಕೋಪನಿಷತ್ತು ನಮ್ಮ ಮುಂದೆ ಬಿಚ್ಚಿಡುತ್ತದೆ. ಸಾಧನೆಯೆಂದರೆ **ಪರಿಪೂರ್ಣತೆಯ ಅನ್ವೇಷಣೆ**. ಅದನ್ನು ಹುಡುಕುತ್ತ, ಅದರ ಸೆಲೆಯಾದ ಆತ್ಮತತ್ತ್ವವನ್ನು ಸಮೀಪಿಸಿದಾಗ ನಾವು ಕಂಡುಕೊಳ್ಳುವುದೇನು? ಅದು ನಮ್ಮ **ನೈಜ ಸ್ವಭಾವ**ವಲ್ಲದೆ ಮತ್ತೇನೂ ಅಲ್ಲ ಎಂಬ ಪರಮಾದ್ಭುತ ಅಂಶವನ್ನು. ಈ ವಿಚಾರಮಾರ್ಗದಲ್ಲಿ ಆಳವಾಗಿ ಹೋದಾಗ ನಮಗೆ ಗೊತ್ತಾಗುವುದೇನು? **ಎಲ್ಲವೂ ಆಗಿರುವ ಬ್ರಹ್ಮವೇ ನಾನು** ಎಂಬ ಇನ್ನೂ ವಿಶಿಷ್ಟವಾದ ಸಂಗತಿ. ಹೀಗೆ ಎಲ್ಲವೂ ಆಗಿರುವ ತತ್ತ್ವವೇ ಪರಿಪೂರ್ಣವಾದ ತತ್ತ್ವ; ಅದೇ ಪ್ರತಿಜೀವಿಯ ಅಂತಸ್ಸತ್ವ ಎಂಬ ಆಧ್ಯಾತ್ಮಿಕ ರಹಸ್ಯದ ಆವರಣವು ನಮಗಿಲ್ಲಿ ಗೋಚರವಾಗುತ್ತದೆ.

## ಜ್ಯೋತಿ ಬೆಳಗುತಿದೆ, ಪರಂಜ್ಯೋತಿ ಬೆಳಗುತಿದೆ

ಆತ್ಮತತ್ತ್ವದ ವಿಚಾರವೇ ಜ್ಞಾನಮಾರ್ಗದ ತಿರುಳು. ಆ ವಿಚಾರಪರವಾದ ಮಾರ್ಗವು ಒಂದೇ ಆಗಿರಬೇಕಾಗಿಲ್ಲ ಎನ್ನುವುದು ಉಪನಿಷತ್ಕಾರರ ಮತ. ಹಾಗೆಂದೇ ಹಲವು ಉಪನಿಷತ್ತುಗಳಲ್ಲಿ ಬೇರೆ ಬೇರೆ ವಿಚಾರ ಮಾರ್ಗಗಳು ಇರುವುದು ಮಾತ್ರವಲ್ಲದೆ, ಒಂದೇ ಉಪನಿಷತ್ತಿನಲ್ಲಿ ಹಲವು ಬಗೆಯ ಆಲೋಚನಾಕ್ರಮಗಳ ಬೋಧನೆಯನ್ನು ಕೂಡ ನಾವು ಕಾಣುತ್ತೇವೆ. ಅಂಥದೊಂದು ಗಹನ ವಿಚಾರಧಾರೆಯನ್ನು ಬೃಹದಾರಣ್ಯಕ ಉಪನಿಷತ್ತಿನ ಜ್ಯೋತಿರ್ಬ್ರಾಹ್ಮಣದಲ್ಲಿ (*ಬೃಹದಾರಣ್ಯಕ ಉಪನಿಷತ್ತು*, ೪:೩) ನಾವು ಗುರುತಿಸಬಹುದು. ಜನಕನು ಸಾಧಾರಣವೆಂಬಂತೆ ಕಾಣುವ ಒಂದು ಪ್ರಶ್ನೆಯನ್ನು ಕೇಳುತ್ತಾನೆ, **"ಮನುಷ್ಯನಿಗೆ ಯಾವುದು ಬೆಳಕು ನೀಡುತ್ತದೆ?"** ಯಾಜ್ಞವಲ್ಕ್ಯ **"ಸೂರ್ಯ"** ಎಂದು ಉತ್ತರ ಕೊಡುತ್ತಾನೆ. **"ಸೂರ್ಯ ಮುಳುಗಿದಾಗ?"**, **"ಚಂದ್ರ"** – ಹೀಗೆ ಪ್ರಶ್ನೋತ್ತರಗಳ ಸರಣಿ ಮುಂದುವರಿಯುತ್ತದೆ. ಪ್ರಕಾಶದ ಅಥವಾ ಅನುಭವದ ಎಲ್ಲ ಸಾಧನಗಳೂ ಅಡಗಿಹೋದಾಗ, ಕೇವಲ ಆತ್ಮವೇ ನಮ್ಮ ಜ್ಯೋತಿಯಾಗುತ್ತದೆ. ಈ ಆತ್ಮವು ಅರಿವಿನ ಸ್ವರೂಪ ಎಂದು ಕೊನೆಯಲ್ಲಿ ಯಾಜ್ಞವಲ್ಕ್ಯನು ಹೇಳುತ್ತಾನೆ.

ಈ ಆತ್ಮವನ್ನು ಹುಡುಕುವುದೆಂತು? ಯಾಜ್ಞವಲ್ಕ್ಯ ಬಹು ಸೂಕ್ಷ್ಮವಾದ ಕೆಲವು ವಿಚಾರಗಳನ್ನು ಮುಂದಿಡುತ್ತಾನೆ: "ಆತ್ಮನು ಬುದ್ಧಿಯ ರೂಪವನ್ನು ಪಡೆದು ಈ ಲೋಕ ಮತ್ತು ಪರಲೋಕಗಳ ನಡುವೆ ಸಂಚರಿಸುತ್ತಾನೆ. ಅವನು ಧ್ಯಾನಿಸುವಂತೆ, ಚಲಿಸುವಂತೆ ತೋರುತ್ತಾನೆ. ಬುದ್ಧಿಯು ಸ್ವಪ್ನಾವಸ್ಥೆಯನ್ನು ಹೊಂದಿದಾಗ ತಾನೂ ಸ್ವಪ್ನಸ್ಥಿತಿಯಲ್ಲಿರುವಂತೆ, ಜಾಗೃದವಸ್ಥೆಯನ್ನು ಮೀರಿಹೋದವನಂತೆ ಕಾಣುತ್ತಾನೆ." (೪–೩–೭)

ಮುಂದೆ ಸ್ವಪ್ನಸ್ಥಿತಿಯ ವರ್ಣನೆಯನ್ನು ಯಾಜ್ಞವಲ್ಕ್ಯ ಹೀಗೆ ಮಾಡುತ್ತಾನೆ: ಸ್ವಪ್ನಸ್ಥಿತಿಯಲ್ಲಿ ಕಾಯಶರೀರವನ್ನು ಆತ್ಮನು ಅಚೇತನಗೊಳಿಸಿಕೊಂಡಿರುತ್ತಾನೆ; ಸ್ವಪ್ನಶರೀರವನ್ನು ನಿರ್ಮಿಸಿಕೊಳ್ಳುತ್ತಾನೆ. ಸ್ವಪ್ನಶರೀರವೆಂದರೆ ಮನಸ್ಸಿನಲ್ಲಿ ಹುದುಗಿರುವ ವಾಸನೆಗಳ ಸಮೂಹ. ಅದನ್ನು ತನ್ನ ಜ್ಯೋತಿಯಿಂದಲೇ ಆತ್ಮನು ಬೆಳಗಿಸಿಕೊಳ್ಳುತ್ತಾನೆ. ಈ ಅವಸ್ಥೆಯಲ್ಲಿ ಬಾಹ್ಯಜ್ಯೋತಿಯ ಆವಶ್ಯಕತೆ ಇರುವುದೇ ಇಲ್ಲ. ಅಲ್ಲಿ ಹೊರಗಿನ ಯಾವ ವಸ್ತುಗಳ ಅವಲಂಬನೆಯೂ ಇರುವುದಿಲ್ಲ. ಅಲ್ಲಿ ರಥ, ಕುದುರೆಗಳು ಇಲ್ಲದಿದ್ದರೂ, ಸ್ವಪ್ನವನ್ನು ಕಾಣುವ ಪುರುಷನು ಅವುಗಳೆಲ್ಲವನ್ನು ತಾನೇ ಸೃಷ್ಟಿಸಿಕೊಳ್ಳುತ್ತಾನೆ. ಅಲ್ಲಿ ಆನಂದ, ಹರ್ಷಗಳು ಇಲ್ಲದಿದ್ದರೂ ಅವುಗಳನ್ನು ಹುಟ್ಟಿಸಿಕೊಳ್ಳುತ್ತಾನೆ. ಅಲ್ಲಿ ಕೆರೆಗಳಾಗಲಿ, ಸರೋವರಗಳಾಗಲಿ ಇಲ್ಲದಿದ್ದರೂ ಅವೆಲ್ಲವೂ ಕನಸಿನಲ್ಲಿ ಹೇಗೋ ತೋರಿಬರುತ್ತವೆ. ಇದಕ್ಕೆ ಕಾರಣ, ಕರ್ಮಗಳಿಂದ ಪ್ರೇರಿತವಾದ ಮನಸ್ಸು, ಬಾಹ್ಯ ವಿಷಯಗಳ ವಾಸನೆಯ ರೂಪವನ್ನು ಪಡೆದು, ಹೊರಗಿನ ಪ್ರಪಂಚದ ಹಾಗೆಯೇ ಭ್ರಾಮಕ ಜಗತ್ತೊಂದನ್ನು ಸ್ವಪ್ನಾವಸ್ಥೆಯಲ್ಲಿ ಸ್ವತಃ ನಿರ್ಮಾಣ ಮಾಡಿಕೊಳ್ಳುತ್ತದೆ. ಪುರುಷನು ಸ್ವಯಂಜ್ಯೋತಿಯಿಂದ ಇದೆಲ್ಲವನ್ನೂ ನೋಡುತ್ತಾನೆ, ಅನುಭವಿಸುತ್ತಾನೆ, ಭಾವಿಸುತ್ತಾನೆ.

ಮುಂದೆ ಅತ್ಯಂತ ರೋಚಕವಾದ ಸಂಗತಿಯೊಂದನ್ನು ಯಾಜ್ಞವಲ್ಕ್ಯನು ಹೇಳುತ್ತಾನೆ: ಸ್ವಪ್ನದಿಂದ ಸುಷುಪ್ತಾವಸ್ಥೆಗೆ ಹೋದ ಪುರುಷನು, ಅಲ್ಲಿ ನಿಲ್ಲದೆ ಮತ್ತೆ ಸ್ವಪ್ನಾವಸ್ಥೆಗೆ ಬರುತ್ತಾನೆ. ಆದರೆ ತನ್ನ ಹಿಂದಿನ ಅವಸ್ಥೆಯಲ್ಲಿ ಏನನ್ನು ನೋಡಿರುತ್ತಾನೋ ಅದನ್ನು ಮರೆತುಬಿಡುತ್ತಾನೆ. ಹಾಗೆಯೇ ಸ್ವಪ್ನಾವಸ್ಥೆಯಿಂದ ಜಾಗೃದವಸ್ಥೆಗೆ ಹೋದಾಗ, ಸ್ವಪ್ನಾವಸ್ಥೆಯಲ್ಲಿ ನೋಡಿರುವುದನ್ನು ಹೆಚ್ಚೂಕಡಮೆ ಮರೆತುಬಿಡುತ್ತಾನೆ. ಇದಕ್ಕೆ ಕಾರಣ ಏನು? ಈ ಅನುಭವಗಳು ನಿಜವಾಗಿಯೂ ನೇರವಾಗಿ ಆತ್ಮನಿಗೆ ಸಂಬಂಧಿಸಿದ್ದರೆ, ಅವು ಯಾವತ್ತೂ ಅವನಿಗೆ ಸ್ಪಷ್ಟವಾಗಿ ತೋರಿಬರಲೇಬೇಕಾಗಿತ್ತು. ಹಾಗೆ ಆಗುವುದಿಲ್ಲವಲ್ಲ! ಅದಕ್ಕೆ ಯಾಜ್ಞವಲ್ಕ್ಯನೇ ಕಾರಣವನ್ನು ಕೊಡುತ್ತಾನೆ: **ಅಸಂಗೋ ಹ್ಯಯಂ ಪುರುಷಃ** – ಎಲ್ಲ ಅನುಭವಗಳೂ ಬುದ್ಧಿಗೆ ಸಂಬಂಧಪಟ್ಟವೇ ಹೊರತು, ನೇರವಾಗಿ ಆತ್ಮನಿಗಲ್ಲ. ಬುದ್ಧಿಯ ಸಂಪರ್ಕದಿಂದ ಮಾತ್ರವೇ ಆತ್ಮನಿಗೆ ಈ ಅನುಭವಗಳು ಆಗುತ್ತವೆ. ಹೀಗಾಗಿ, ಆತ್ಮನು ಜಾಗೃತ ಅವಸ್ಥೆಯಲ್ಲಾಗಲಿ, ಸ್ವಪ್ನಾವಸ್ಥೆಯಲ್ಲಾಗಲಿ ಅಥವಾ ಸುಷುಪ್ತಾವಸ್ಥೆಯಲ್ಲಾಗಲಿ ಬುದ್ಧಿಯ ಗುಣಗಳಾದ ಪಾಪಪುಣ್ಯಗಳ ಜೊತೆಗೆ ವಾಸ್ತವವಾಗಿ ಸಂಪರ್ಕ ಹೊಂದುವುದೇ ಇಲ್ಲ.

ಒಂದು ಮೀನು ನದಿಯ ಎರಡೂ ದಡಗಳ ಆಚೆ ಈಚೆ ಸಂಚರಿಸುವಂತೆ, ಪುರುಷನು **ಸ್ವಪ್ನ** ಮತ್ತು **ಜಾಗ್ರತ್** – ಈ ಎರಡೂ ಅವಸ್ಥೆಗಳಲ್ಲಿ ಒಂದಾದಮೇಲೊಂದರಂತೆ ಕ್ರಮವಾಗಿ ಸಂಚರಿಸುತ್ತಿರುತ್ತಾನೆ; ದೇಹೇಂದ್ರಿಯಗಳ ಸಂಯೋಗದಿಂದ ಈ ಅವಸ್ಥೆಗಳಲ್ಲಿ ಉಂಟಾಗುವ ಅನೇಕ ಕ್ರಿಯೆಗಳ ಆಯಾಸದಿಂದ ಬಳಲುತ್ತಾನೆ. ಕಡೆಗೆ ಎಲ್ಲಿ ಏನನ್ನೂ ಆಶಿಸುವುದಿಲ್ಲವೋ, ಹೀಗಾಗಿ ಯಾವ ಕ್ರಿಯೆಗಳೂ ಜರುಗುವುದಿಲ್ಲವೋ, ಅಂಥ ಸುಷುಪ್ತಾವಸ್ಥೆಗೆ ಹೋಗುತ್ತಾನೆ. ಇಲ್ಲಿ ಅವನಿಗೆ ಯಾವ ಕಾಮವೂ

ಉಂಟಾಗುವುದಿಲ್ಲ; ಅಲ್ಲಿ ಧರ್ಮಾಧರ್ಮಗಳ ಸೋಂಕೂ ಇಲ್ಲ. ಪೂರ್ಣಕಾಮನಾದ, ಆತ್ಮಕಾಮನಾದ, ವಿಶೋಕನಾದ ರೂಪದಲ್ಲಿ ಪುರುಷನು ಇರುತ್ತಾನೆ. ಇದೇ ಅವನ ನಿಜವಾದ ಸ್ವರೂಪ. ಈ ಸುಷುಪ್ತಿಯ ಅವಸ್ಥೆಯಲ್ಲಿ ತಂದೆ, ತಾಯಿ, ಲೋಕಗಳು, ದೇವತೆಗಳು, ವೇದಗಳು, ಕಳ್ಳರು, ಚಂಡಾಲರು, ತಾಪಸರು, ಪುಣ್ಯ, ಪಾಪ – ಹೀಗೆ ಹೊರಪ್ರಪಂಚದಲ್ಲಿ ಕಾಣಸಿಗುವ ಜನರು, ಅವರ ಗುಣಸ್ವಭಾವಗಳು, ಸಂಬಂಧಗಳು ಯಾವುದರ ನಂಟೂ ಅವನಿಗೆ ಇರುವುದಿಲ್ಲ. ಏಕೆಂದರೆ, **ತೀರ್ಣೋ ಹಿ ತದಾ ಸರ್ವಾಂಛೋಕಾನ್ ಹೃದಯಸ್ಯ ಭವತಿ** – ಪುರುಷನು ತನ್ನ ಬುದ್ಧಿಯ ಸಂಬಂಧದಿಂದ ಉಂಟಾಗುವ ಎಲ್ಲ ಬಗೆಯ ಶೋಕಗಳನ್ನೂ ದಾಟಿಹೋಗುತ್ತಾನೆ.

ಹಾಗಾದರೆ ಆತ್ಮನು ಅನುಭವಶೂನ್ಯನೇ? ಯಾವುದರ ಅನುಭವವೂ ಅವನಿಗೆ ಆಗುವುದಿಲ್ಲವೆಂದರೆ ಅವನು ಶೂನ್ಯ ಸ್ವರೂಪನೇ? "ಇಲ್ಲ" ಎಂದು ಯಾಜ್ಞವಲ್ಕ್ಯನು ಹೇಳುತ್ತಾನೆ. ಸೂರ್ಯ ತಾನು ಬೆಳಗುವುದಕ್ಕೆ ಯಾವ ವಸ್ತುವೂ ಇಲ್ಲದಿದ್ದರೂ ತನ್ನ ಪ್ರಕಾಶಿಸುವ ಸ್ವಭಾವವನ್ನು ಕಳೆದುಕೊಳ್ಳುವುದಿಲ್ಲ, ಅಲ್ಲವೆ? ಅದೇ ರೀತಿ, **ದ್ರಷ್ಟುಃ ದೃಷ್ಟೇಃ ವಿಪರಿಲೋಪೋ ವಿದ್ಯತೇ ಅವಿನಾಶಿತ್ವಾತ್** – ನೋಡಲಿಕ್ಕೆ ಅಥವಾ ಪ್ರಕಾಶಿಸಲಿಕ್ಕೆ ಬೇರೆ ಬಾಹ್ಯ ವಸ್ತು ಏನೂ ಇಲ್ಲದಿದ್ದರೂ, ಆತ್ಮನು ತನ್ನ ನೋಡುವ ಸ್ವಭಾವವನ್ನು ಬಿಟ್ಟುಕೊಡುವುದಿಲ್ಲ. ಏಕೆಂದರೆ ಆತ್ಮನು ಅವಿನಾಶಿಯು. ಅವನ ಸಹಜ ಸ್ವಭಾವವೇ ನೋಡುವಿಕೆಯಾದ್ದರಿಂದ, ಅವನು ಯಾವತ್ತೂ ನಿತ್ಯತತ್ತ್ವವಾಗಿರುವುದರಿಂದ, ಅವನ ಈ ಸ್ವಭಾವವು ಎಂದೂ ಲುಪ್ತವಾಗುವುದೇ ಇಲ್ಲ. ಹೀಗೆ ಸ್ವಯಂಪ್ರಜ್ಞೆಯನ್ನು ಹೊಂದಿರುವ ನಿತ್ಯಾತ್ಮವನ್ನು ಬಹಳ ಮನೋಜ್ಞರೀತಿಯಲ್ಲಿ ಯಾಜ್ಞವಲ್ಕ್ಯನು ಉಪದೇಶಿಸುತ್ತಾನೆ.

## ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ

ಆಧ್ಯಾತ್ಮಿಕ ಸಾಧನೆಯ ಒಂದು ಮುಖ ಭೌತಿಕ ಸೀಮಿತತೆಗಳಿಂದ ಮೇಲೇರುವುದಾದರೆ ಮತ್ತೊಂದು ಮುಖ, ಅಮೃತತ್ವದ ಸೆಲೆಯಾದ ದಿವ್ಯತೆಯನ್ನು ಅರಸುವುದು. ಆತ್ಮದ ಅನ್ವೇಷಣೆಯು ನಮಗೆ ಅಮೃತತ್ವವನ್ನು ತಂದುಕೊಡುತ್ತದೆ ಎನ್ನುವುದು ಉಪನಿಷತ್ತುಗಳು ನೀಡುವ ಆಶ್ವಾಸನೆ. ಇದು ಬೃಹದಾರಣ್ಯಕ ಉಪನಿಷತ್ತಿನಲ್ಲಿನ ಮೈತ್ರೇಯಿ–ಯಾಜ್ಞವಲ್ಕ್ಯರ ಸಂಭಾಷಣೆಯಲ್ಲಿ ಧ್ವನಿತವಾಗಿದೆ. ಅದಕ್ಕಾಗಿ ಬೇಕಾದ ಸಾಧನಾಮಾರ್ಗವನ್ನೂ ನಾವಿಲ್ಲಿ ಕಾಣಬಹುದು.

ಅಮೃತತ್ವದ ಸಾಧನೆಯನ್ನು ಉಪದೇಶಿಸೆಂದು ಪ್ರಾರ್ಥಿಸಿದ ತನ್ನ ಪತ್ನಿಯಾದ ಮೈತ್ರೇಯಿಗೆ ಯಾಜ್ಞವಲ್ಕ್ಯನು ಹೀಗೆ ಹೇಳುತ್ತಾನೆ: "ಮೈತ್ರೇಯಿ, ನೀನು ಅಮೃತತ್ವದ ಸಾಧನೆಯನ್ನು ಅರಿಯಬೇಕೆಂದು ಇಚ್ಛಿಸುವುದಾದರೆ ನಾನು ಅದನ್ನು ವಿವರಿಸುತ್ತೇನೆ. ಏಕಾಗ್ರವಾಗಿ ಅದನ್ನು ಧ್ಯಾನಿಸು. ಪತಿಯ ಪ್ರಯೋಜನಕ್ಕಾಗಿ ಪತಿಯು ಪತ್ನಿಗೆ ಪ್ರಿಯನಾಗಿರುವುದಿಲ್ಲ. ತನ್ನ, ಅಂದರೆ, ಪತ್ನಿಯ ಪ್ರಯೋಜನಕ್ಕಾಗಿ ಪತಿಯು ಪ್ರಿಯನಾಗಿರುತ್ತಾನೆ. ಪತ್ನಿಯ ಪ್ರಯೋಜನಕ್ಕಾಗಿ ಪತ್ನಿಯು ಪತಿಗೆ ಪ್ರಿಯಳಾಗುವುದಿಲ್ಲ. ತನ್ನ, ಅಂದರೆ ಪತಿಯ ಪ್ರಯೋಜನಕ್ಕಾಗಿ ಪತ್ನಿಯು ಪ್ರಿಯಳಾಗಿರುತ್ತಾಳೆ. ಹೀಗೆ ಕೆಲವು ನಿದರ್ಶನಗಳ ನಂತರ ಉಪನಿಷತ್ತು ಹೀಗೆ ಹೇಳುತ್ತದೆ: **ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ, ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ** – ಎಲ್ಲದರ ಪ್ರಯೋಜನಕ್ಕಾಗಿ ಯಾವುದೂ ಪ್ರಿಯವಾಗಿರುವುದಿಲ್ಲ, ತನ್ನ ಪ್ರಯೋಜನಕ್ಕಾಗಿಯೇ ಎಲ್ಲವೂ ಪ್ರಿಯವಾಗಿರುತ್ತದೆ." (*ಬೃಹದಾರಣ್ಯಕ ಉಪನಿಷತ್ತು,* ೪:೫:೬)

ಪ್ರೀತಿ ಎನ್ನುವುದು ಮಾನವಸಹಜ ಭಾವನೆಯಾಗಿದೆ. ಅದು ತಾನೇತಾನಾಗಿ ಹೇಗೆ ಮೂಡುವುದು? ಇದರ ಮನೋವಿಶ್ಲೇಷಣೆಯನ್ನು ಉಪನಿಷತ್ತು ಸುಂದರವಾಗಿ ಮಾಡುತ್ತದೆ. ಹೆಂಡತಿಗೆ ಗಂಡನು ಏತಕ್ಕೆ ಪ್ರಿಯನಾಗುತ್ತಾನೆ? ಯಾಜ್ಞವಲ್ಕ್ಯ ಹೇಳುವಂತೆ, ಗಂಡನೆಂದು ಹೆಂಡತಿ ಗಂಡನನ್ನು ಪ್ರೀತಿಸುವುದಿಲ್ಲ. ಹೆಂಡತಿಯು ಗಂಡನಲ್ಲಿ ತನ್ನನ್ನೇ ನೋಡುತ್ತಾಳೆ. ಅಂದರೆ, ತನ್ನ ಆತ್ಮವನ್ನೇ ಅವನಲ್ಲಿ ಕಾಣುತ್ತಾಳೆ. ಅದಕ್ಕೆಂದೇ ಅವಳು ಗಂಡನನ್ನು ಪ್ರೀತಿಸುತ್ತಾಳೆ. ಯಾಜ್ಞವಲ್ಕ್ಯನ ಪ್ರಕಾರ, ಹೀಗೆಯೇ ಎಲ್ಲ ಜನರೂ ಮಿಕ್ಕೆಲ್ಲ ಜನರನ್ನೂ ಪ್ರೀತಿಸುವುದು. ಪ್ರಾಪಂಚಿಕವಾದ ಯಾವುದೇ ಬಾಂಧವ್ಯವಾಗಲಿ ಪ್ರೀತಿಗೆ ಆಧಾರವಾಗುವುದಿಲ್ಲ. ಆತ್ಮವೆಂಬ ಹೆಸರಿನಿಂದ ಕರೆಯುವ ಆಧ್ಯಾತ್ಮಿಕ ಏಕತೆ ಅಥವಾ ಸಮಾನತೆ ಮಾತ್ರವೇ ಈ ಬಗೆಯ ಸಾರ್ವತ್ರಿಕ ಪ್ರೀತಿಗೆ ಕಾರಣವಾಗುತ್ತದೆ. ಹೀಗೆ ಲೌಕಿಕವೆನಿಸುವ ಪ್ರಾಪಂಚಿಕ ಪ್ರೀತಿಯಲ್ಲೂ ಅಲೌಕಿಕವಾದ ಆಧ್ಯಾತ್ಮಿಕ ಸತ್ಯವೊಂದರ ಅನ್ವೇಷಣೆ ಹೀಗೆ ನಡೆದಿರುವುದು ಅತ್ಯಂತ ಸ್ವಾರಸ್ಯಕರವಾದ ವಿಷಯ.

## ಶ್ರೋತವ್ಯೋ, ಮಂತವ್ಯೋ, ನಿದಿಧ್ಯಾಸಿತವ್ಯಃ

ಉಪನಿಷತ್ತು ಮುಂದುವರಿದು ಹೇಳುತ್ತದೆ: **ಆತ್ಮಾ ವಾ ಅರೇ ದ್ರಷ್ಟವ್ಯಃ, ಶ್ರೋತವ್ಯೋ, ಮಂತವ್ಯೋ ನಿದಿಧ್ಯಾಸಿತವ್ಯೋ** – ಆತ್ಮನನ್ನು ನೋಡಬೇಕು. (ಹೇಗೆಂದರೆ ಅದಕ್ಕಾಗಿ) ಶ್ರವಣ, ಮನನ, ನಿದಿಧ್ಯಾಸನಗಳನ್ನು ಮಾಡಬೇಕು. ಈ ಸಾಧನಾ ಮಾರ್ಗದ ಆವಶ್ಯಕತೆಯನ್ನೂ ಉಪನಿಷತ್ತು ಸ್ಪಷ್ಟಶಬ್ದಗಳಲ್ಲಿ ಹೀಗೆ ಎತ್ತಿ ತೋರಿಸುತ್ತದೆ: **ಆತ್ಮನಿ ಖಲು ಅರೇ ದೃಷ್ಟೇ ಶ್ರುತೇ ಮತೇ ವಿಜ್ಞಾತ ಇದಂ ಸರ್ವಂ ವಿದಿತಮ್** – ಶ್ರೀಶಂಕರರು ಹೇಳುವಂತೆ, ಆತ್ಮವನ್ನು ಆಚಾರ್ಯರು ಮತ್ತು ಶಾಸ್ತ್ರಗಳ ಮೂಲಕವೇ ಕೇಳಬೇಕು. ನಂತರ ಅದರ ಬಗ್ಗೆ ಮನನ ಅಥವಾ ವೈಚಾರಿಕ ವಿಶ್ಲೇಷಣೆ ನಡೆಸಬೇಕು. ಅದೂ ಶಾಸ್ತ್ರಾಧಾರಿತವಾಗಿಯೇ ಇರಬೇಕು. ಕಡೆಯದಾಗಿ ಆತ್ಮವು ಹೀಗೆಯೇ, ಬೇರೆ ರೀತಿಯಲ್ಲ ಎಂದು ನಿರ್ಧರಿಸಿ ತಿಳಿದುಕೊಳ್ಳಬೇಕು. ಹೀಗೆ ಮಾಡಿದರೆ, ಇವೆಲ್ಲವೂ ಅಂದರೆ, ಆತ್ಮಕ್ಕಿಂತ ಭಿನ್ನವಾದುದೆಂದು ನಾವು ಬಗೆಯುವುದೆಲ್ಲವನ್ನೂ ನಾವು ತಿಳಿದುಕೊಳ್ಳಬಹುದು. ಸ್ವಾರಸ್ಯವೆಂದರೆ, ನಿಜವಾಗಲೂ ಆತ್ಮನಿಗಿಂತ ಭಿನ್ನವಾದುದು ಏನೂ ಇಲ್ಲವೇ ಇಲ್ಲ! (**ಇದಂ ವಿದಿತಂ ಭವತಿ. ಇದಂ ಸರ್ವಮಿತಿ ಯದಾತ್ಮನಃ ಅನ್ಯತ್. ಆತ್ಮವ್ಯತಿರೇಕೇಣ ಅಭಾವಾತ್**– *ಶಾಂಕರಭಾಷ್ಯ*)

## ನೇತಿ, ನೇತಿ

ಬೃಹದಾರಣ್ಯಕ ಉಪನಿಷತ್ತು ತಿಳಿಸಿಕೊಡುವ ಆತ್ಮಾನ್ವೇಷಣೆಯ ಇನ್ನೊಂದು ಅಪೂರ್ವ ಮಜಲನ್ನು ಮುಂದೆ ನೋಡುತ್ತೇವೆ. ವಿಶ್ವದಲ್ಲಿ ನಾವು ಅನುಭವಿಸುವುದೆಲ್ಲವೂ, ಅರಿಯುವುದೆಲ್ಲವೂ ಆತ್ಮವೇ ಎನ್ನುವುದನ್ನು ಹಲವು ನಿದರ್ಶನಗಳ ಮೂಲಕ ಮೈತ್ರೇಯಿಗೆ ಮನದಟ್ಟು ಮಾಡಲು ಯಾಜ್ಞವಲ್ಕ್ಯ ಪ್ರಯತ್ನಿಸುತ್ತಾನೆ. ಹಾಗೆಯೇ, ಆತ್ಮವೇ ಎಲ್ಲದರ ಗತಿ ಅಂದರೆ ಆಶ್ರಯ ಅಥವಾ ಆಧಾರ ಎನ್ನುವುದನ್ನೂ ವಿಶದಪಡಿಸುತ್ತಾನೆ. ಕೊನೆಗೆ ಆತ್ಮಾನುಭವದ ಪರಮಾನುಭೂತಿಯನ್ನು ಹೀಗೆ ವಿವರಿಸುತ್ತಾನೆ: "ಹೇಗೆ ಉಪ್ಪಿನ ಗಟ್ಟಿಯು ಒಳಗೆ ಹೊರಗಿಲ್ಲದೆ, ಪೂರ್ಣವಾಗಿ ಸಮರಸವಾಗಿರುವುದೊ, ಹಾಗೆಯೇ, ಈ ಆತ್ಮನು ಒಳಗೂ ಹೊರಗೂ ಇಲ್ಲದ ಪೂರ್ಣವಾದ ಪ್ರಜ್ಞಾನಘನವಾಗಿರುತ್ತದೆ. ಕಡೆಗೆ ಜೀವಭೂತಗಳ ವೈವಿಧ್ಯತೆಯಿಂದ ಉಂಟಾದ ಆತ್ಮನ ಭಿನ್ನತೆಯು ಅವುಗಳ ಲಯದೊಂದಿಗೆ ತಾನೂ ಲಯವಾಗುತ್ತದೆ. ಹೀಗೆ ದೇಹ–ಇಂದ್ರಿಯಗಳಿಂದ ಮುಕ್ತನಾದವನಿಗೆ ಅವುಗಳಿಂದ ಉಂಟಾಗುವ ವಿವಿಧ ರೀತಿಯ ವಿಶೇಷ ಜ್ಞಾನಗಳು (ನಾನು ಇಂಥವನು, ಇದು ನನ್ನ ಮನೆ ಮುಂತಾದವು) ಉಂಟಾಗುವುದಿಲ್ಲ" (*ಬೃಹದಾರಣ್ಯಕ ಉಪನಿಷತ್ತು*, ೪:೫:೧೩).

ಈ ಹಂತದಲ್ಲಿ ಮೈತ್ರೇಯಿ ಹೇಳುತ್ತಾಳೆ, "ಭಗವಾನ್, ಆತ್ಮನಿಗೆ ಯಾವ ವಿಶೇಷ ಜ್ಞಾನವಿಲ್ಲ ಎಂದು ಹೇಳಿ ನನ್ನನ್ನು ಭ್ರಾಂತಿಗೊಳಿಸುತ್ತಿದ್ದೀರಿ. ನನಗೆ ಇದು ಅರ್ಥವಾಗುತ್ತಿಲ್ಲ." ಆಗ ಯಾಜ್ಞವಲ್ಕ್ಯ ಸ್ಪಷ್ಟೀಕರಣ ಕೊಡುತ್ತಾನೆ, "ಮೈತ್ರೇಯಿ, ನಿನ್ನನ್ನು ಭ್ರಾಂತಿಗೊಳಿಸಲು ನಾನು ಇದನ್ನು ಹೇಳುತ್ತಿಲ್ಲ. ಆತ್ಮವು ಇರುವುದೇ ಹಾಗೆ. ಅವನು ಅವಿಕ್ರಿಯನು, ವಿನಾಶರಹಿತನು. ಎಲ್ಲಿ ಎರಡಾಗಿ ತೋರಿಬರುತ್ತಿದೆಯೋ, ಅಲ್ಲಿ ಒಬ್ಬನು ಇನ್ನೊಂದನ್ನು ನೋಡುತ್ತಾನೆ, ಮೂಸುತ್ತಾನೆ, ಸವಿಯುತ್ತಾನೆ, ಮಾತನಾಡುತ್ತಾನೆ, ಯೋಚಿಸುತ್ತಾನೆ, ಕೇಳುತ್ತಾನೆ, ಸ್ಪರ್ಶಿಸುತ್ತಾನೆ, ತಿಳಿದುಕೊಳ್ಳುತ್ತಾನೆ. ಆದರೆ, ಯಾರಿಗೆ ಪ್ರಜ್ಞಾನಘನವಾದ ಆತ್ಮವೇ ಎಲ್ಲವೂ ಆಗಿದೆಯೋ, ಅವನು ಯಾವುದರಿಂದ ತಾನೆ ಯಾವುದನ್ನು ನೋಡಬಲ್ಲನು, ಮೂಸಬಲ್ಲನು, ಸವಿಯಬಲ್ಲನು, ಮಾತನಾಡಬಲ್ಲನು. ಯೋಚಿಸಬಲ್ಲನು. ಕೇಳಬಲ್ಲನು, ಸ್ಪರ್ಶಿಸಬಲ್ಲನು, ತಿಳಿದುಕೊಳ್ಳಬಲ್ಲನು? ಇದಕ್ಕೆ ಕಾರಣ ಏನು ಗೊತ್ತೇ? ನಾನು ಉಪದೇಶಿಸುತ್ತಿರುವ ಆತ್ಮವು ತಿಳಿದುಕೊಳ್ಳುವುದೇ ಹೊರತು, ಅದು ತಿಳಿದುಕೊಳ್ಳಬಹುದಾದ ವಸ್ತುವಲ್ಲ. ಏಕೆ ಗೊತ್ತೇ? **ವಿಜ್ಞಾತಾರಮ್ ಅರೇ ಕೇನ ವಿಜಾನೀಯಾತ್** – ಕೇವಲ ತಿಳಿದುಕೊಳ್ಳಬಲ್ಲವನನ್ನು (ಅದೊಂದು ಮಾತ್ರವೇ ಇರುವಾಗ), ಬೇರೆ ಯಾರು ತಾನೇ ತಿಳಿದುಕೊಳ್ಳಬಲ್ಲರು? ಹಾಗೆಂದೇ ಇದನ್ನು **ನೇತಿ, ನೇತಿ** – "ಇದಲ್ಲ, ಇದಲ್ಲ" ಎಂದು ಗುರುತು ಮಾಡಿ ಹೇಳುವುದು. ಏಕೆಂದರೆ ನಿತ್ಯವಿಷಯಿಯಾದ ಆತ್ಮವನ್ನು 'ಇದು, ಇದು' ಎಂದು ನಿರ್ದೇಶಿಸಿ ಹೇಳಲು ಸಾಧ್ಯವಿಲ್ಲ." (೪:೫:೧೫)

ಅನಂತರ ಯಾಜ್ಞವಲ್ಕ್ಯನು ಆತ್ಮನು ಪ್ರಾಪಂಚಿಕ ವಸ್ತುಗಳ ಹಾಗೆ ಗ್ರಾಹ್ಯನಲ್ಲ, ಕ್ಷಯಗೊಳ್ಳುವುದಿಲ್ಲ, ಅಸಕ್ತನು, ವ್ಯಥೆಯಿಲ್ಲದವನು, ಹಿಂಸೆಗೆ ಒಳಪಡುವುದಿಲ್ಲ ಎನ್ನುತ್ತಾ 'ನೇತಿ, ನೇತಿ' ವಿಧಾನದಲ್ಲಿಯೇ ಉಪದೇಶಿಸುತ್ತಾನೆ. ಕಡೆಯಲ್ಲಿ, "ಮೈತ್ರೇಯಿ, ಈಗ ನೀನು ಉಪದೇಶ ಪಡೆದಿರುವೆ. ಅಮೃತತ್ವದ ಸಾಧನೆಗೆ ಮಾಡಬೇಕಾದುದು ಇಷ್ಟೇ" ಎಂದು ಉಪಸಂಹಾರ ಮಾಡುತ್ತಾನೆ.

ಅತ್ಯಂತ ಗೂಢವಾದ ಉಪದೇಶ ಇದು. ಜಗತ್ತಿನ ಎಲ್ಲ ವಸ್ತುಗಳ ಸಾಮಾನ್ಯ ಅಂಶವೇ, ಅವುಗಳೆಲ್ಲರ ಆಧಾರವೇ ಆತ್ಮವೆಂದು ಬಿಂಬಿಸಲು ಯಾಜ್ಞವಲ್ಕ್ಯನು ಮೊದಲು ಪ್ರಯತ್ನಿಸಿದನು. ಆದರೆ ಆ ವಸ್ತುಗಳಿಗಿರುವ ಯಾವ ವಿಶೇಷಣಗಳೂ ಆತ್ಮನಿಗೆ ಇಲ್ಲವೆಂದು ಹೇಳಿದನು. ಈ ವಿರೋಧಾಭಾಸವನ್ನು ಹೊಂದಿಸುವುದು ಆತನಿಗೆ ಸಾಧ್ಯವಾಗಲಿಲ್ಲ; ಯಾರಿಂದಲೂ ಸಾಧ್ಯವಾಗದು. ಆತ್ಮನಲ್ಲಿ ಅಂತಹ ವಿಶೇಷಣಗಳಿಗೆ ಎಡೆಯೇ ಇಲ್ಲ. ಏಕೆಂದರೆ ಆತ್ಮಾನುಭವದಲ್ಲಿ ಎರಡೆಂಬ ಭಾವನೆಯೇ ಇರಲಾರದು. ಹೀಗಾಗಿ, ನಿತ್ಯಜ್ಞಾತೃವಾದ ಆತ್ಮವು ಮಾತ್ರವೇ ಇರುವ ಆ ಸ್ಥಿತಿಯಲ್ಲಿ, ಅದನ್ನೂ ಅರಿಯಬಲ್ಲ ಮತ್ತೊಂದು ಇರಲು ಹೇಗೆ ತಾನೇ ಸಾಧ್ಯ? ಹೀಗೆ "ಇದಲ್ಲ, ಇದಲ್ಲ" ಎಂದು ಆತ್ಮವನ್ನು ನಿರ್ದೇಶಿಸಬಹುದೇ ಹೊರತು, ನಿರ್ದಿಷ್ಟ ಗುಣಗಳಿಂದ ಕೂಡಿದ ವಸ್ತುವಂತೆ, 'ಇದು' ಎಂದು ಎಂದಿಗೂ ಆತ್ಮನನ್ನು ಗುರುತು ಮಾಡಿ ತೋರಿಸಲಾಗದು.

'ನೇತಿ, ನೇತಿ' ಯ ಈ ಸಾಧನಾಮಾರ್ಗದಲ್ಲಿ ನಿಷ್ಠನಾಗಿರುವವನು, ಆತ್ಮವಲ್ಲದ ಸಂಗತಿಗಳನ್ನು ನಿಜವೆಂದು ಹೇಗೆ ತಾನೇ ಭಾವಿಸುತ್ತಾನೆ? ಅವುಗಳಿಗಾಗಿ ಹೇಗೆ ತಾನೇ ಹಾತೊರೆಯುತ್ತಾನೆ? ಅದಕ್ಕೆಂದೇ ಇದೇ ಉಪನಿಷತ್ತಿನಲ್ಲಿ ಋಷಿಗಳು ಉದ್ಗರಿಸುತ್ತಾರೆ, "ನಮಗೆ ಆತ್ಮವೇ ಲೋಕವಾಗಿದೆ. ಹೀಗಿರುವಾಗಿ ಮಕ್ಕಳನ್ನು ಪಡೆಯುವುದರಿಂದ ನಮಗೆ ಪ್ರಯೋಜನವಾದರೂ ಏನು?..... ಬ್ರಹ್ಮಜ್ಞಾನದಿಂದ ಉಂಟಾಗುವ ಮಹಿಮೆಯು ಕರ್ಮದಿಂದ ಹೆಚ್ಚಾಗುವುದಿಲ್ಲ ಅಥವಾ ಕಡಮೆಯಾಗುವುದಿಲ್ಲ. ಆದುದರಿಂದ ಆ ಮಹಿಮೆಯ ಸ್ವರೂಪವನ್ನು ತಿಳಿದುಕೊಳ್ಳಬೇಕು" (೪.೪. ೨೨, ೨೩). ವೈಚಾರಿಕತೆಯಿಂದ ಪರಿಪುಷ್ಟವಾದ ಈ ಬಗೆಯ ನಿಷ್ಕರ್ಷೆಯೇ ನೈಜ ಸಂನ್ಯಾಸ ಮತ್ತು ಅಮೃತತ್ವಪ್ರಾಪ್ತಿಗೆ ಸಾಧನ. ಇದೇ ಯಾಜ್ಞವಲ್ಕ್ಯನ ನಿಲುವು.

## ಉಪಸಂಹಾರ

ಮುಂದಿನ ಕಾಲಮಾನದಲ್ಲಿ ಕಾಣಿಸಿಕೊಂಡ ಬೌದ್ಧಿಕ ಕಸರತ್ತುಗಳಿಂದ ಭಿನ್ನವಾದ, ಸ್ವಚ್ಛಂದ ಹಾಗೂ ಮುಕ್ತ ವೈಚಾರಿಕ ವಾತಾವರಣವನ್ನು ಉಪನಿಷತ್ತುಗಳ ಅಧ್ಯಯನದಲ್ಲಿ ನಾವು ಅನುಭವಿಸುತ್ತೇವೆ. ಅಪರಿಪೂರ್ಣವೂ ಅನಿತ್ಯವೂ ಆಗಿ ತೋರಿಬರುವ ಪ್ರಾಪಂಚಿಕ ವಸ್ತುಗಳ ಮೂಲಸೆಲೆಯೂ ಆಧಾರವೂ ಆದ ಪರಿಪೂರ್ಣ ಹಾಗೂ ನಿತ್ಯ ಸತ್ಯತತ್ತ್ವವೊಂದರ ಬೌದ್ಧಿಕ ಹಾಗೂ ಆನುಭಾವಿಕ ಅನ್ವೇಷಣೆಯ ಸೊಬಗು ಆನಂದಗಳಲ್ಲಿ ಭಾಗಿಯಾಗಿ ನಾವಿಲ್ಲಿ ಹರ್ಷಿಸುತ್ತೇವೆ. ಯಾವ ಮತಸಿದ್ಧಾಂತಗಳ, ಪೂರ್ವಗ್ರಹಗಳ, ಅಂತೆಕಂತೆಗಳ ಗೋಜಲೂ ಇಲ್ಲದ ಪರಿಶುದ್ಧ ವೈಚಾರಿಕ ಸಾಹಸಯಾತ್ರೆ ನಮ್ಮದಾಗುತ್ತದೆ. ಆ ಮೂಲಕ ದಿವ್ಯತೆಯ ಪವಿತ್ರ ಮಾನಸಿಕ ಸ್ನಾನದಲ್ಲಿ ನಾವು ಮಿಂದು, ಬೌದ್ಧಿಕವಾಗಿ ಶುಚಿಗೊಳ್ಳುತ್ತೇವೆ.